# ದಾಸರಾಯರ ವಾಣಿಯಲ್ಲಿ ಮೂಡಿಬಂದ ಯುಕ್ತ್ಯನುಸಂಧಾನಗಳು - ೧

ದೇವರನ್ನುಳಿದು ಎಲ್ಲರೂ ದಾಸರು. ಅಧ್ಯಾತ್ಮ ಕ್ಷೇತ್ರದಲ್ಲಿ ಮುಮುಕ್ಷುವಿಗೆ ಶ್ರವಣ, ಮನನ ಮತ್ತು ನಿದಿಧ್ಯಾಸನಾದಿಗಳೇ ವಿಹಿತ ಪ್ರಧಾನ ಸಾಧನಗಳು. ಅಂದರೆ ಬ್ರಹ್ಮ ಜಿಜ್ಞಾಸಾ ಇವುಗಳಲ್ಲಿ ಆದ್ಯ ಶ್ರವಣ. ಈ ಶ್ರವಣಕ್ಕೆ ವಿಷಯ ಭಗವಂತನ ಮಹಿಮೆಗಳು. ಭಗವಂತನ ಮಹಿಮಾದಿಗಳ ನಿರೂಪಣ ಸಂದರ್ಭದಲ್ಲಿ ಅನೇಕ ಸಲ ದೇವತೆಗಳ, ಋಷಿಗಳ ಮತ್ತಿತರ ಭಗವದ್ಭಕ್ತರನೇಕರ ಉಲ್ಲೇಖಗಳನ್ನೂ, ಸೃಷ್ಟಿ ಸ್ಥಿತ್ಯಾದಿ ಅನೇಕ ವಿವರಣೆಗಳನ್ನು ಮತ್ತು ವಂಶಾವತರಣಗಳನ್ನೂ ನೋಡುತ್ತೇವೆ. ಇವೆಲ್ಲವೂ ನಮಗೆ ಮುಖ್ಯವಾಗಿ ತಿಳಿಯುವುದು ಮೂಲತಃ ಪುರಾಣ ಶ್ರವಣಾದಿಗಳಿಂದಲೇ ಪ್ರಾಯಶಃ ಭಗವಾನ್ ಶ್ರೀ ವೇದವ್ಯಾಸರು ರಚಿಸಿದ ಪುರಾಣೋಪ ಪುರಾಣಗಳೇ ಶ್ರವಣ ಸಾಧನಗಳಾಗಿವೆ. ಇವುಗಳಿಗೆ ಶೃತಿ ಮೂಲ, ಯುಕ್ತಿ ಮೂಲ, ಆಪ್ತಿಮೂಲಗಳಿರುವುದರಿಂದ ಪೌರುಷೇಯ ಆಗಮಗಳಾದರೂ ಪರಮ ಪ್ರಮಾಣ ಪದವಿಯನ್ನು ಹೊಂದಿವೆ. ಇವುಗಳನ್ನು ಶ್ರವಣ, ಮನನ ಮಾಡುತ್ತಿದ್ದರೆ ಜ್ಞಾನ, ತನ್ಮೂಲಕ ಭಗವಂತನಲ್ಲಿ ಭಕ್ತಿ ಉದಯವಾಗುತ್ತವೆ. ಸಾಧಕನಿಗೆ ಕ್ರಮೇಣ ಜ್ಞಾನಭಕ್ತ್ಯಾದಿಗಳು ವೃದ್ಧಿಯಾದಷ್ಟೂ ವಿಷಯ ಲಾಲಸೆ ಕಡಿಮೆಯಾಗುತ್ತ ಹೋಗುತ್ತದೆ. ಕ್ಷುದ್ರಕಾಮನೆಗಳ ತ್ಯಾಗವೇ ವೈರಾಗ್ಯ ಮೂಲ.

ಪುರಾಣಗಳನೇಕವಿದ್ದರೂ ಅವುಗಳಲ್ಲಿ ರಾಮಾಯಣ, ಭಾರತ ಮತ್ತು ಭಾಗವತ ಇವುಗಳನ್ನೇ ಬಹುಶಃ ಶ್ರವಣ ಮಾಡುವದು ಆಸ್ತಿಕ ಮಹನೀಯರ ಅಭ್ಯಾಸ.

ಈ ಶ್ರವಣ ಸಂದರ್ಭಗಳಲ್ಲಿ ಭಗವಂತನು ಭಕ್ತರನ್ನು ಆಪತ್ತಿನಿಂದ ಪೊರೆದ ಕಥಾಭಾಗಗಳು / ಘಟನೆಗಳು ಅತ್ಯಂತ ಹಾರ್ದ್ರಿಕವಾಗಿಯೂ, ಶ್ರವಣೀಯವಾಗಿಯೂ ಮತ್ತು ಮನನೀಯವಾಗಿಯೂ ಇವೆ. ಆ ಸಂದರ್ಭಗಳನ್ನು ಪುರಾಣ ಶ್ರವಣ ಮಾಡುವಾಗ ಅಲ್ಲಿ ಕಥಾಸಂದರ್ಭ ಯಾವ ಪ್ರಕಾರ ವರ್ಣಿತವಾಗಿದೆಯೋ ಹಾಗೆ ವರ್ಣಿಸುತ್ತಾರೆ. ಅದೇ ಪ್ರಕಾರವೇ ಶ್ರವಣ ಮಾಡುತ್ತೇವೆ.

ಉದಾಹರಣಾರ್ಥವಾಗಿ, ಕರಿರಾಜನು ಮೊಸಳೆಯ ಬಾಯಿಗೆ ಸಿಕ್ಕಿ ಆಪತ್ತಿನಲ್ಲಿರುವಾಗ, ಪ್ರಹ್ಲಾದನನ್ನು ಅವನ ತಂದೆ ಹಿರಣ್ಯ ಕಶಿಪು "ನಿನ್ನೊಡೆಯನೆಲ್ಲಿಹನೆಂದು ತೋರಿಸು, ಇಲ್ಲವಾದರೆ ನಿನ್ನ ಶಿರವನ್ನು ತರಿಯುವೆನೆಂದು" ಕೋಪಾಟೋಪದಿಂದ ಖಡ್ಗ ಹಿಡಿದು ಆರ್ಭಟಿಸುತ್ತಿರುವಾಗ, ಪುಟ್ಟಬಾಲಕ ಧ್ರುವ ಜಿಗುಪ್ಸೆಯಿಂದ ಮನೆಯಿಂದ ಹೊರಟುಹೋಗಿ ಕಾಡಿನಲ್ಲಿ ತಪಸ್ಸು ಮಾಡುತ್ತಿರುವಾಗ, ಅಜಾಮಿಳನು ಅಂತ್ಯಕಾಲದಲ್ಲಿ ಯಮಭಟರನ್ನು ನೋಡಿ ಹೆದರಿ ನಾರಾಯಣನೆಂದು ಕೂಗಿದಾಗ, ಸುದಾಮನ ದಾರಿದ್ರ್ಯ ಪರಿಹಾರ ಮಾಡಿದಾಗ, ಅಂಬರೀಷನನ್ನು ದೂರ್ವಾಸರ ಶಾಪದಿಂದ ರಕ್ಷಿಸಿದಾಗ, ಗರ್ಭದಲ್ಲಿ ಪರೀಕ್ಷಿತನನ್ನು ಬ್ರಹ್ಮಾಸ್ತ್ರದಿಂದ ರಕ್ಷಿಸಿ ಪಾಂಡವರ ಸಂತತಿ ಉಳಿಸಿದಾಗ, ಮಹಾಭಾರತ ಯುದ್ಧದಲ್ಲಿ ಪಾಂಡವರಿಗೆ ಜಯ ಲಭ್ಯವಾಗುವಂತೆ ಮಾಡಿ ಧರ್ಮರಕ್ಷಣೆ ಮಾಡಿದಾಗ, ಕಲ್ಲಾಗಿದ್ದ ಅಹಲ್ಯೆಯನ್ನು ಶಾಪವಿಮೋಚನೆ ಮಾಡಿದಾಗ, ಶರಣುಬಂದ ವಿಭೀಷಣನಿಗೆ ಲಂಕಾರಾಜ್ಯವನ್ನು ಕೊಟ್ಟಂಥ ಅನೇಕಾನೇಕ ಸಂದರ್ಭಗಳು, ಶ್ರೀಹರಿಯ ಭಕ್ತವಾತ್ಸಲ್ಯ, ಆಪದ್ಬಂಧುತ್ವ, ಭಕ್ತಾನುಕಂಪಿತ್ವ, ಭಕ್ತಾಧೀನತ್ವ, ದುಷ್ಟನಿಗ್ರಹತ್ವ, ಶಿಷ್ಟಪರಿಪಾಲಕತ್ವ, ಧರ್ಮಸಂರಕ್ಷಕತ್ವಾದಿ ಗುಣಗಳನ್ನು ಅನೇಕ ಅಮೂಲ್ಯ ಬಿರುದಾವಳಿಗಳನ್ನು ಜ್ಞಾಪಿಸುತ್ತವೆ. ಪುರಾಣ ಶ್ರವಣ ಕಾಲದಲ್ಲಿ ಇವೆಲ್ಲವುಗಳೂ ಕಥಾ ಸಂದರ್ಭಾನುಸಾರವಾಗಿ ನಿರೂಪಿಸಲ್ಪಡುತ್ತವೆ.

ಈ ಉದಾಹರಣೆಗಳನ್ನೇ ದಾಸರಾಯರು ತಮ್ಮ ಭಗವನ್ನಾಮ ರೂಪವಾದ ಪದಗಳಲ್ಲಿ ಅನೇಕ ಬಾರಿ ಬಳಸಿದ್ದಾರೆ. ಆದರೆ ಅವರು ಬಳಸಿದ ಮಾದರಿ ಮಾತ್ರ ಚಿತ್ರ ವಿಚಿತ್ರ ಪ್ರತಿಪದದಲ್ಲೂ ಅವರ ಬಳಕೆಯಲ್ಲಿ ನಾವಿನ್ಯತೆ ಇದೆ.

ಶ್ರೀ ಪುರಂದರ ದಾಸಾದಿ ಅನೇಕ ಅಪರೋಕ್ಷ ಜ್ಞಾನಿಗಳು ಮೇಲೆ ಹೇಳಿದ ಸಂದರ್ಭಗಳನ್ನು ಕೇವಲ ಕಥಾ ವಸ್ತುವಿಗೆ ಸೀಮಿತವಾಗಿ ಉಳಿಸಲಿಲ್ಲ. ಅಲ್ಲಿ ಅಡಗಿಕೊಂಡು ರಹಸ್ಯವೃತ್ತಿಯಿಂದ ಲೀನವಾದ ಪರಮಾತ್ಮನ ಮಹಿಮಾ ವಿಶೇಷಗಳನ್ನು ದ್ಯೋತಕ ಮಾಡಿರುವುದು ಸಕಾರಣವಾಗಿ ವಿಷಯ ನಿರೂಪಿಸಿ ಬಂದು ತರ್ಕಬದ್ಧವಾದ ನಿರ್ಧಾರಕ್ಕೆ ಬರುತ್ತಾರೆ. ಇದಕ್ಕೇ ಯುಕ್ತ್ಯನುಸಂಧಾನವೆಂದು ಇನ್ನೊಂದು ಪಾರಿಭಾಷಿಕಪದ.

ಆಯಾಸಂದರ್ಭಗಳನ್ನು ಬಿಟ್ಟು ಅವರ ಮನ ಅಷ್ಟು ಸುಲಭವಾಗಿ ಸ್ಥಳಾಂತರಿಸುವುದಿಲ್ಲ. ಶ್ರೀಟೀಕಾರಾಯರು ಶ್ರೀಮನ್ನ್ಯಾಯ ಸುಧೆಯ ಮಂಗಳಾಚರಣ ಶ್ಲೋಕಗಳಲ್ಲಿ "ಅನುವ್ಯಾಖ್ಯಾನ ನಳಿನೇ ಚಂಚರೀ ಕತಿ ಮೇಮನಃ". "ಅನುವ್ಯಾಖ್ಯಾನವೆಂಬ ಕಮಲ ಪುಷ್ಪವನ್ನು ಬಿಟ್ಟು ದೂರ ಹೋಗದೇ ನನ್ನ ಮನಸ್ಸು ಅದರ ಸಮೀಪವರ್ತಿಯಾಗಿ ಪರಿಭ್ರಮಿಸುತ್ತಿದೆ" ಎಂದು ಸೂಚಿಸಿರುತ್ತಾರೆ. ಹಾಗೆಯೇ ಬೆಲ್ಲಕ್ಕೆ ಮುಕುರಿದ ಇರುವೆಗಳಂತೆ ಇವರ ಪರಿ. ಬೆಲ್ಲವನ್ನು ಬಿಟ್ಟು ಹೋಗುವ ಇಚ್ಛೆಯೇ ಇರುವೆಗಳಿಗಿರುವುದಿಲ್ಲ. ದಾಸರಾಯರು ಸಂದರ್ಭವನ್ನು ಅನೇಕ ದೃಷ್ಟಿಕೋಣಗಳಿಂದ ನೋಡುತ್ತಾರೆ. ಅವರವು ಪಕ್ವವಿಚಾರಗಳು. ನ್ಯಾಯ ಬದ್ಧ ಸರಣಿ ಅತಿ ಉನ್ನತ ಮಟ್ಟದ ಊಹಾಪೋಹ ಸಾಮರ್ಥ್ಯ. ಪದಗಳಲ್ಲಿ ಭಕ್ತಿ, ಕವಿ ಹೃದಯ ಎದ್ದು ಕಾಣುತ್ತದೆ.

ಪುರಾಣಗಳನ್ನು ಬರೆದವರು ವ್ಯಾಸರಾದರೆ ಅವುಗಳನ್ನು ನೋಡುವವರು ಅವರ ದಾಸರು. ವ್ಯಾಸರ ಹೃದಯ ದಾಸರಿಗೆ ಗೊತ್ತು. ದಾಸರೆಂದರೆ ಕೇವಲ ಶ್ರೀಪುರಂದರ ದಾಸರಿಂದ ಈಚೆಗೆ ಬಂದವರೆಂದಲ್ಲ. ಬ್ರಹ್ಮಾದಿಗಳಿಂದ ಈಚಿನವರು ಸಕಲ ಜೀವರು. ವಾಯು ದೇವರ ತೃತೀಯಾವತಾರರಾದ ಶ್ರೀ ಮಧ್ವಾಚಾರ್ಯರು ಅವರ ಅನುಯಾಯಿಗಳೆಲ್ಲರು. ಶ್ರೀ ವೇದವ್ಯಾಸದೇವರ ಹೃದಯವನ್ನು ಬಲ್ಲವರಲ್ಲಿ ಅಗ್ರಗಣ್ಯರು ಶ್ರೀಮಧ್ವರು. ಉಳಿದ ಅನುಯಾಯಿಗಳು ಯಥಾಯೋಗ್ಯತಾನುಸಾರ. ಸುಮಧ್ವ ವಿಜಯದಲ್ಲಿ ಶ್ರೀ ಮಧ್ವರಿಗೆ "ಪುರುಷೋತ್ತಮ ದಾಸ" ಇತ್ಯಾದಿ ಇಲ್ಲೇಖಗಳಿವೆ. ಆಚಾರ್ಯರೆಂದು, ತೀರ್ಥರೆಂದು, ದಾಸರೆಂದು ಯಾವ ರೀತಿ ನಾಮಧೇಯವು ಅಂತ್ಯವಾದರೂ ಎಲ್ಲರೂ ದಾಸರೇ. ನಾಮಧೇಯವು 'ದಾಸ' ಎಂದು ಕೊನೆಗೊಂಡರೆ ಕಂಠತಃ ಸ್ಪಷ್ಟ ಪಡಿಸಿದಂತೆ (ಎಕ್ಸ್‌ಪ್ಲಿಸಿಟ್). ಉಳಿದ ಯಾವ ರೀತಿ ಕೊನೆಗೊಂಡರೂ ದಾಸತ್ವ ಊಹನೀಯ. (ಇಂಪ್ಲಿಸಿಟ್). ಇದಿಲ್ಲಿಗೆ ಇರಲಿ.

(ಮುಂದುವರೆಯುವುದು)